ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದನ್ನು ನಮ್ಮ ಸರ್ಕಾರ ಮಾಡುವುದಕ್ಕೆ ಬರುವುದಿಲ್ಲ. ಕೇಂದ್ರ ಸರ್ಕಾರದ ಸ್ಕಾಲರ್‌ಶಿಪ್ ಕೇಂದ್ರ ಸರ್ಕಾರದವರು ಕೊಡತಕ್ಕವರು. ಎಕ್ಸ್‌ಟ್ರಾ ಬೋರ್ಡಿಂಗ್ ಚಾರ್ಜನ್ನು ರಾಜ್ಯಸರ್ಕಾರದವರು ಕೊಡುತ್ತಿದ್ದಾರೆ. ಇದರ ಬಗ್ಗೆ ಕೇಂದ್ರದ ಪ್ರಧಾನ ಮಂತ್ರಿಯವರು ಮತ್ತು ಹೋಂ ಮಿನಿಸ್ಟರ್ ಇದು ಬಹಳ ಹಿಂದೆ ನಿಗದಿ ಮಾಡಿರತಕ್ಕಂತಹ ಸ್ಕಾಲರ್‌ಶಿಪ್ಸ್, ಈಗ ಬೆಲೆಗಳು ಏರಿ ಜೀವನ ಮಟ್ಟ ಜಾಸ್ತಿಯಾಗಿರುವುದರಿಂದ ಅದನ್ನು ಏರಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಕೋಣಂಜೂರು ಲಿಂಗಪ್ಪ :—ಈ ಎಸ್. ಟಿ. ಮತ್ತು ಎಸ್. ಸಿ. ಹಾಸ್ಟೆಲುಗಳಲ್ಲಿ ಮುಗ್ಧ ವಿದ್ಯಾರ್ಥಿಗಳಿಂದ ರುಜು ಹಾಕಿಸಿಕೊಂಡು ಅಪಾರವಾದ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಇದಕ್ಕೆ ಏನು ಪರಿಹಾರವನ್ನು ಕಂಡು ಹಿಡಿದಿದ್ದೀರಿ?

ಶ್ರೀ. ಎಂ. ಮಲ್ಲಿಕಾರ್ಜುನಸ್ವಾಮಿ.— ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಪಿ. ಪಿ. ಹೆಗಡೆ.....ಈಗ ಕೊಡುತ್ತಿರುವ ಸ್ಕಾಲರ್‌ಶಿಪ್ ಕಡಿಮೆ ಎಂಬುದನ್ನು ತಾವು ಒಪ್ಪಿದ್ದೀರಿ. ಅದೇ ರೀತಿ ಎಕ್ಸ್‌ಟ್ರಾ ಬೋರ್ಡಿಂಗ್ ಚಾರ್ಜನ್ನು ರಾಜ್ಯ ಸರ್ಕಾರದವರು ಕೊಡುತ್ತಿದ್ದಾರೆ. ಆದರೆ ಅದನ್ನು ಹಾಸ್ಟೆಲಿನಲ್ಲಿರುವವರಿಗೆ ಮಾತ್ರ ಕೊಡುತ್ತಿದ್ದಾರೆ. ಡೇ ಸ್ಕೂಲರ್ಸ್‌ಗೆ ಕೊಡುತ್ತಾ ಇಲ್ಲ. ಅದ್ದರಿಂದ ಅದನ್ನು ಡೇ ಸ್ಕೂಲರ್ಸ್‌ಗೂ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. ಮಾನ್ಯ ಸದಸ್ಯರಿಗೆ ಸದನದ ಹೊರಗಡೆ ಸಹ ಎಷ್ಟೋ ಸಲ ಹೇಳಿದ್ದೇನೆ. ಹಾಸ್ಟೆಲುಗಳ ಸಂಖ್ಯೆ ಹೆಚ್ಚು ಮಾಡಿದರೆ ಕಾಲೇಜು ವಿದ್ಯಾರ್ಥಿಗಳಿಗೂ ಅಲ್ಲಿ ಅವಕಾಶ ಕೊಟ್ಟು ಅನುಕೂಲ ಕಲ್ಪಿಸುವುದಕ್ಕಾಗುತ್ತದೆ ಮತ್ತು ಅವರಿಗೆ ಎಕ್ಸ್‌ಟ್ರಾ ಬೋರ್ಡಿಂಗ್ ಚಾರ್ಜಸ್ ಕೊಡುವುದಕ್ಕೂ ಸಾಧ್ಯವಾಗುತ್ತದೆ. ಸರ್ಕಾರ ಇತ್ತೀಚೆಗೆ ಒಂದು ಪಾಲಿಸಿ ನಿರ್ಣಯ ತೆಗೆದುಕೊಂಡು ೬ ನೇ ಯೋಜನೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೂ ಹಾಸ್ಟೆಲ್ ಕಟ್ಟಡ ಕಟ್ಟಿಸಿಕೊಡಬೇಕೆಂದು ತೀರ್ಮಾನ ಮಾಡಿದೆ.

MISAPPROPRIATION OF FUNDS IN T.D.B , ARSIKERE

117. SRI H. S. SIDDAPPA :—(*Arasikere.*)

Will the Minister for Community Development and Social Welfare be pleased to state :—

(Sri H.S. Siddappa)

(*a*) whether any misappropriation of funds in Taluk Development Board, Arsikere has been reported by the Audit ;

(*b*) the number of misappropriation cases reported and the amount involved ?

SRI M. MALLIKARJUNASWAMY :—(Minister for Community Development and Social Welfare).

(*a*) Yes.

(*b*) 13 cases Amount involved is Rs. 7,176-81.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಮ್ಮ ಉತ್ತರದಲ್ಲಿ 13 ಕೇಸುಗಳು ಇನ್‌ವಾಲ್ವ್ ಆಗಿದೆ ಎಂದು ಹೇಳಿದ್ದೀರಿ. ಆ 13 ಕೇಸಸ್ ಯಾವುವು ?

†SRI M. MALLAKARJUNASWAMY.—The 13 cases are as follows :

		Rs.
1.	Short remittances	200.00
2.	Excess drawal of salary	486.00
3.	Double drawal of T. A. to members	366.50
4.	Short remittance of cost of hybrid jowar.	667.65
5.	T. A. to members disbursed but acknowledgments not obtained.	29.90
6.	Non-disbursement of T.A. drawn on 24-10-70 and not accounted for in the cash book.	46.00

7.	T. A. drawn on 28-9-70 but acknowledgment not obtained.	42.40
8.	Excess amount charged in the cash books as disbursed without vouchers	227.40
9.	Double debit of trunk call charges	140.40
10.	Non-remittance of T. D. B. collections.	1066.00
11.	Non-remittance of sale proceeds of P. P. chemicals.	2153.60
12.	Non-remittance of T. D. B. collections on 9-8-1971, 5-10-1971 and 25-11-72.	37.50
13.	Cost of P. P. chemicals to be recovered	103.00
	undisbured T. A.	1621-00

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಮಿಸಪ್ರೋಪ್ರಿಯೇಶನ್ ಕೇಸನಲ್ಲಿ ಖಾನಗೀ ಜನರು ಯಾರ್ಯಾರು ಇನ್‌ವಾಲ್ವ್ ಆಗಿದ್ದಾರೆ ಮತ್ತು ಸರ್ಕಾರೀ ಅಧಿಕಾರಿಗಳು ಯಾರ್ಯಾರು ಇನ್‌ವಾಲ್ವ್ ಆಗಿದ್ದಾರೆ?

ಶ್ರೀ ಮಲ್ಲಿಕಾರ್ಜುನಸ್ವಾಮಿ.—ಖಾನಗೀ ಜನರು ಯಾರೂ ಇನ್‌ವಾಲ್ವ್ ಆಗಿಲ್ಲ. ಇನ್‌ವಾಲ್ವ್ ಆಗಿರತಕ್ಕವರು ಅಧಿಕಾರಿಗಳು. ತಾಲ್ಲೂಕು ಬೋರ್ಡಿನ ಎರಡನೇ ದರ್ಜೆ ಗುಮ್ಮಾಸ್ತ ಶ್ರೀಯುತ ನಂಜುಂಡ ಶೆಟ್ಟಿ ಎನ್ನತಕ್ಕವರು ಒಟ್ಟು 9 ಕೇಸುಗಳಲ್ಲಿ ಇನ್‌ವಾಲ್ವ್ ಆಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಇನ್‌ವಾಲ್ವ್ ಆಗಿರತಕ್ಕಂತಹ ಅಧಿಕಾರಿಗಳ ಮೇಲೆ, ಆಡಿಡ್ ರಿಪೋರ್ಟು ಆಧಾರದ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಮತ್ತು ಯಾವ ಶಿಕ್ಷೆ ಅವರಿಗೆ ವಿಧಿಸಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಕಲೇತಪುರದ ಅಸಿಸ್ಟಾಂಟ್ ಕಮಿಶನರನ್ನು ಎನ್‌ಕ್ವಯರಿ ಆಫೀಸರನ್ನಾಗಿ ನೇಮಕ ಮಾಡಿ ಈಗಾಗಲೇ ಅವರು ವಿಚಾರಣೆ ನಡೆಸುತ್ತಿದ್ದಾರೆ.

ಶ್ರೀ ಎಚ್.ಎಸ್. ಸಿದ್ದಪ್ಪ.—ಸಕಲೇಶಪುರದ ಅಸಿಸ್ಟೆಂಟ್ ಕಮಿಶನರನ್ನು ಮೂರು ವರ್ಷಗಳ ಹಿಂದೆ ನೇಮಿಸಿದ್ದೀರಿ. ಅವರು ವರದಿ ಕೊಡುವುದಕ್ಕೆ ಎಷ್ಟು ವರ್ಷ ಹಿಡಿಯುತ್ತದೆ ಮತ್ತು ಅದರ ಪ್ರಕಾರ ಹಣವನ್ನು ರಿಕವರ್ ಮಾಡುವುದಕ್ಕೆ ಎಷ್ಟು ವರ್ಷ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಸಾರ್ವಜನಿಕರ ಹಣ ದುರುಪಯೋಗ ವಾದಾಗ ತಕ್ಷಣ ವಿಚಾರಣೆಯಾಗಬೇಕೆಂದು ಮಾನ್ಯ ಸದಸ್ಯರು ತೋರಿಸಿದ ಕಳಕಳಿಯನ್ನು ಒಪ್ಪಿಕೊಳ್ಳುತ್ತಾ ಬೇಗನೇ ಅವರಿಂದ ರಿಪೋರ್ಟು ತರಿಸಿಕೊಳ್ಳುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹಂಜೆ ಶಿವಣ್ಣ.—ಅನೇಕ ಕಡೆ ತಾಲ್ಲೂಕು ಬೋರ್ಡುಗಳಲ್ಲಿ ಹಣ ದುರುಪಯೋಗವಾದಾಗ ಅದರ ರಿಕವರಿ ಮಾಡುವುದಕ್ಕೆ 7-8 ವರ್ಷಗಳಾದರೂ ಕ್ರಮ ತೆಗೆದುಕೊಳ್ಳಲಿಲ್ಲ. ಅದೇರೀತಿ ಇದನ್ನು ಸಹ ಮಾಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.. ಅದರ ಬಗ್ಗೆ ಮತ್ತೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದೇನೆ.

SALE OF BOTTLED TODDY AND ARRACK

132 SRI B. SATYANARAYANA SINGH (Hospet).—Will the Chief Minister be pleased to state:—

(*a*) whether the Government has any proposal to take up by itself the bottling of toddy and arrack to stop adulteration and consequential malpractices in the sale;

(*b*) whether the Government has any proposal to arrange for the sale of only bottled toddy and arrack and post a Government Officer at the retail selling point ?

SRI N. HUTCHMATI GOWDA.—(Minister for Revenue) On behalf of Sri D. Devaraj Urs. (Chief Minister.)

(*a*) No.

(*b*) No.